ಕರ್ನಾಟಕ ಸರ್ಕಾರ

Office of the
Director of Employment & Training
No. 9/1, Sri Prashanth Complex,
Mission Road, Bangalore-560 027.

ಸಂ:ಉತಇ:ತರಬೇತಿ:ಸಂ-1:ವಿವ-15:96-97. ದಿನಾಂಕ: 29-7-98.

ಗೆ:

ಕಾರ್ಯದರ್ಶಿಗಳು,
ವಾರ್ಡ್ಸ್,
57:2 ಎ, ಕೆ.ಬಿ.ಎಮ್.ಇಂಡಸ್ಟ್ರಿಯಲ್ ಎಸ್ಟೇಟ್,
ರಾಜೇಶ್ವರಿ ಚಿತ್ರ ಮಂದಿರದ ಹತ್ತಿರ,
ಏರ್ ಪೋರ್ಟ್ ರಸ್ತೆ,
ಬೆಂಗಳೂರು-560 017.

ಮಾನ್ಯರೇ,

ವಿಷಯ: ವಾರ್ಡ್ಸ್ ತರಬೇತಿ ಕೇಂದ್ರದಲ್ಲಿ ನೀಡಲಾಗುವ ತರಬೇತಿಗೆ ರಾಜ್ಯ ವೃತ್ತಿ ಶಿಕ್ಷಣ ಪರಿಷತ್ತಿನ ಮಾನ್ಯತೆ ನೀಡುವ ಬಗ್ಗೆ.

ಉಲ್ಲೇಖ: 1) ಸಂಸ್ಥೆಯ ಪತ್ರ 6-6-96.
2) ವಿಭಾಗೀಯ ಕಛೇರಿ ಪತ್ರ ದಿನಾಂಕ: 13-2-97.

-:-:-:-

1. ಕಾರ್ಯದರ್ಶಿಗಳು, ವಾರ್ಡ್ಸ್, ಏರ್ ಪೋರ್ಟ್ ರಸ್ತೆ, ಬೆಂಗಳೂರು ಇವರು ತಮ್ಮ ಸಂಸ್ಥೆಯಲ್ಲಿ ಮಾನಸಿಕವಾಗಿ ದುರ್ಬಲರಾಗಿರುವವರಿಗೆ 'ಫೈಲ್ ಮೇಕಿಂಗ್' ಚಾಕ್ ಮೇಕಿಂಗ್ ಮತ್ತು 'ಟೈಲರಿಂಗ್' ವೃತ್ತಿಗಳಲ್ಲಿ ತರಬೇತಿ ನೀಡುತ್ತಿರುವುದಾಗಿ ಹೇಳಿ, ಇದಕ್ಕೆ ರಾಜ್ಯ ವೃತ್ತಿ ಶಿಕ್ಷಣ ಪರಿಷತ್ತಿಗೆ ಅನುಮೋದನೆ ದೊರಕಿಸಿ ಕೊಡಲು ಕೋರಿರುತ್ತಾರೆ. ಈ ಬಗ್ಗೆ ಶ್ರೀಯುತ ಬಿ.ರವೀಂದ್ರನಾಥ್, ಆಗಿನ ಪ್ರಾಚಾರ್ಯರು ಕೈಗಾರಿಕಾ ತರಬೇತಿ ಸಂಸ್ಥೆ, ಬೆಂಗಳೂರು-29 ಇವರನ್ನು ಸದರಿ ಸಂಸ್ಥೆಗೆ ಭೇಟಿ ನೀಡಿ ಪರಿವೀಕ್ಷಣೆ ನಡೆಸಿ, ವಿವರವಾದ ವರದಿ ನೀಡಲು ಕೋರಲಾಗಿದ್ದು, ಈ ಅಧಿಕಾರಿಯವರು ಪರಿವೀಕ್ಷಣೆ ನಡೆಸಿ, 13-2-97 ರಂದು ವರದಿ ಸಲ್ಲಿಸಿರುತ್ತಾರೆ.

2. ಪರಿಶೀಲಿಸಲಾಗಿ, ಸದರಿ ಸಂಸ್ಥೆಯವರು ತರಬೇತಿಗೆ ಅಗತ್ಯವಾದ ಉಪಕರಣಗಳು ಮತ್ತು ಶಿಕ್ಷಕ ಸಿಬ್ಬಂದಿಯವರನ್ನು ಒದಗಿಸಿ ತರಬೇತಿಯನ್ನು ಸಮರ್ಪಕವಾಗಿ ನೀಡುತ್ತಿದ್ದಾರೆಂದು ವರದಿ ನೀಡಿರುತ್ತಾರೆ.

3. ಮೇಲೆ ಹೇಳಿರುವ ವಿಷಯವನ್ನು ಕೂಲಂಕುಶವಾಗಿ ಪರಿಶೀಲಿಸಿ, ರಾಜ್ಯ ವೃತ್ತಿ ಶಿಕ್ಷಣ ಪರಿಷತ್ತಿನ ಅನುಮತಿಯನ್ನು ಕಾಯ್ದಿರಿಸಿ, ವಾರ್ಡ್ಸ್(ವೆಲ್ ಫೇರ್ ಅಸೋಸಿಯೇಷನ್ ಫಾರ್ ರಿಹಾಬಿಲಿಟೇಷನ್ ಆಫ್ ಡಿಸಾಬಲ್ಡ್ ಸೊಸೈಟಿ) ಏರ್‌ಪೋರ್ಟ್ ರಸ್ತೆ, ಬೆಂಗಳೂರು ಇವರು ನಡೆಸುತ್ತಿರುವ ಕೆಳಕಂಡ ವೃತ್ತಿಗಳು ನಡೆಸುತ್ತಿರುವ ಅಲ್ಪಾವಧಿ ತರಬೇತಿ ಕಾರ್ಯಕ್ರಮಕ್ಕೆ ರಾಜ್ಯ ವೃತ್ತಿ ಶಿಕ್ಷಣ ಪರಿಷತ್ತಿನ ಅಡಿಯಲ್ಲಿ ತಾತ್ಕಾಲಿಕ ಮಾನ್ಯತೆಯನ್ನು ಈ ಮೂಲಕ ನೀಡಲಾಗಿದೆ.

1) ಪೈಲ್ ಮೇಕಿಂಗ್ — 6 ತಿಂಗಳಿನಿಂದ 1 ವರ್ಷ ಅವಧಿ
2) ಚಾಕ್ ಮೇಕಿಂಗ್ — 6 ತಿಂಗಳಿನಿಂದ 1 ವರ್ಷ ಅವಧಿ
3) ಟೈಲರಿಂಗ್ — 6 ತಿಂಗಳಿನಿಂದ 1 ವರ್ಷ ಅವಧಿ

4. ಮೇಲೆ ತಿಳಿಸಿರುವ ತರಬೇತಿ ಕಾರ್ಯಕ್ರಮಗಳು 6 ತಿಂಗಳಿನಿಂದ ಒಂದು ವರ್ಷದ

4) ಅವಧಿಯದಾಗಿದ್ದು, ತರಬೇತಿ ಅವಧಿ ಮುಗಿದ ನಂತರ ನಿರ್ದೇಶನಾಲಯದ ಪರೀಕ್ಷಾ ವಿಭಾಗದ ಮೂಲಕ ರಾಜ್ಯ ವೃತ್ತಿ ಶಿಕ್ಷಣ ಪರಿಷತ್ತಿನ ಅಡಿಯಲ್ಲಿ ಪರೀಕ್ಷೆ ನಡೆಸಿ, ಪ್ರಮಾಣ ಪತ್ರ ನೀಡಲಾಗುವುದು. ಈ ಬಗ್ಗೆ ಹೆಚ್ಚಿನ ವಿವರಗಳಿಗೆ ಮತ್ತು ತೆಗೆದುಕೊಳ್ಳಬೇಕಾದ ಕ್ರಮಗಳಿಗೆ ಜಂಟಿ ನಿರ್ದೇಶಕರು, ಪರೀಕ್ಷಾ ನಿಯಂತ್ರಕರು, ನಿರ್ದೇಶನಾಲಯ ಇವರನ್ನು ಸಂಪರ್ಕಿಸಲು ಸೂಚಿಸಿದೆ.

5) ಮುಂದುವರೆದು ಈ ಮೂಲಕ ನೀಡಲಾಗುತ್ತಿರುವ ಮಾನ್ಯತೆ ಯಿಂದಾಗಿ ಇಲಾಖೆಗೆ : ಸರ್ಕಾರಕ್ಕೆ ಯಾವುದೇ ಅರ್ಥಿಕ ಜವಾಬ್ದಾರಿ ಇರುವುದಿಲ್ಲವೆಂದು ಸ್ಪಷ್ಟಪಡಿಸಲಾಗಿದೆ.

ತಮ್ಮ ವಿಶ್ವಾಸಿ,

ಕರಡು ಪ್ರತಿಯನ್ನು
ನಿರ್ದೇಶಕರು ಒಪ್ಪಿದ್ದಾರೆ.

(ಎನ್.ಎಸ್.ನಾರಾಯಣ ರಾವ್)
ಅಪರ ನಿರ್ದೇಶಕರು(ತರಬೇತಿ ಮತ್ತು ಆಡಳಿತ)
ನಿರ್ದೇಶಕರ ಪರವಾಗಿ,
ಉದ್ಯೋಗ ಮತ್ತು ತರಬೇತಿ.